


International Journal of Kannada Research
www.kannadajournal.com

**ISSN: 2454–5813**
IJKR 2022; 8(4): 92-95
© 2022 IJKR
www.kannadajournal.com
Received: 11-08-2022
Accepted: 13-09-2022

**ಶಿವರಾಜ್ ಜಿ**
ಸಂಶೋಧನಾ ವಿದ್ಯಾರ್ಥಿ (ಸಮಾಜ ವಿಜ್ಞಾನ ಹಾಗಗೂ ಮಾನವಿಕ ವಿಭಾಗ) ಶ್ರೀನಿವಾಸ ವಿಶ್ವ ವಿದ್ಯಾಲಯ, ಪಾಂಡೇಶ್ವರ, ಮಂಗಳೂರು, ಕರ್ನಾಟಕ, ಭಾರತ

**ಡಾ. ರಾಜಶೇಖರ ಜಮದಂಡಿ**
ಮಾರ್ಗದರ್ಶಕರು (ಸಮಾಜ ವಿಜ್ಞಾನ ಹಾಗಗೂ ಮಾನವಿಕ ವಿಭಾಗ) ಶ್ರೀನಿವಾಸ ವಿಶ್ವ ವಿದ್ಯಾಲಯ, ಪಾಂಡೇಶ್ವರ, ಮಂಗಳೂರು, ಕರ್ನಾಟಕ, ಭಾರತ

**Corresponding Author:**
**ಶಿವರಾಜ್ ಜಿ**
ಸಂಶೋಧನಾ ವಿದ್ಯಾರ್ಥಿ (ಸಮಾಜ ವಿಜ್ಞಾನ ಹಾಗಗೂ ಮಾನವಿಕ ವಿಭಾಗ) ಶ್ರೀನಿವಾಸ ವಿಶ್ವ ವಿದ್ಯಾಲಯ, ಪಾಂಡೇಶ್ವರ, ಮಂಗಳೂರು, ಕರ್ನಾಟಕ, ಭಾರತ

# ಕರ್ನಾಟಕ ರಂಭೂಮಿ ವಿಮರ್ಶಾತ್ಮಕ ಪರಿಚಯ

**ಶಿವರಾಜ್ ಜಿ, ಡಾ. ರಾಜಶೇಖರ ಜಮದಂಡಿ**

## ಪೀಠಿಕೆ

ರಂಗಭೂಮಿ, ಅಭಿನಯ ಎಂಬ ಪರಿಕಲ್ಪನೆ ನಮಗೆ ದೊರೆತಿದ್ದು ಗ್ರೀಕರಿಂದ ಆದರೆ ನಾಟಕ ರಚನೆಯ ಕಲೆ ಜನಿಸಿದ್ದು ನಮ್ಮ ಭಾರತದಲ್ಲೀ. ಅಂತಹ ನಾಟಕವನ್ನು ಕನ್ನಡದಲ್ಲಿ ಮೊದಲು ರಚಿಸಿದ್ದು 'ಸಿಂಗರಾರ್ಯ'. ಈತ ರಚಿಸಿದ 'ಮಿತ್ರಾವಿಂದಾ ಗೋವಿಂದಾ' ಎಂಬ ನಾಟಕವು ಕೃಷ್ಣನ ಮೇಲೆ ರಚಿತವಾಗಿರುವ ನಾಟಕ. ಸಿಂಗರಾರ್ಯನು ಈ ನಾಟಕವನ್ನು ತನಗೆ ಆಶ್ರಯ ನೀಡಿದ ಮೈಸೂರಿನ ದೊರೆ 'ಚಿಕ್ಕ ದೇವರಾಯ'ನನ್ನು ಹೋಲಿಸಿ ಬರೆದಿರಬಹುದೆಂದು ಭಾಸವಾಗುತ್ತದೆ.

ರಂಗಭೂಮಿ ಕೇವಲ ಮನಂರಜನಾತ್ಮಕವಾಗಿ ಮಾತ್ರ ಪ್ರದರ್ಶನ ಇರುವುದಲ್ಲ. ರಂಗಭೂಮಿ ಜನರ ಜೀವನಕ್ಕೂ ಸಂಪರ್ಕವನ್ನೇರ್ಪಡಿಸುವುದಾಗಿರುತ್ತದೆ. ಆಧುನಿಕ ಕಾಲದ ಧೋರಣೆಗಳನ್ನು ತೋರಿಸಿ ವಿಷಯಗಳಿಗೆ ಸ್ಪಂಧಿಸುವುದು ನಾಟಕದ ಉದ್ದೇಶ. ನಾಟಕ ಎಂದರೆ ಕೇವಲ ಹವ್ಯಾಸವಲ್ಲ, ಅದೊಂದು ವೃತ್ತಿಯಾಗಬೇಕು. ಲಾಭ ಇದರ ಉದ್ದೇಶವಲ್ಲ, ವಿಲಾಸ ಹಾಗೂ ಉಲ್ಲಾಸ ಇದರ ಉದ್ದೇಶವಾಗಬೇಕು. ನಾಟಕಗಳು ಒಂದು ಬಗೆಯ ಕ್ರಾಂತಿಕಾರಕ ವಿಚಾರಧಾರೆಯಾಗಬೇಕು. ನಾಟಕಗಳು ಜನರಲ್ಲಿ ಜಾಗೃಥಿಯನ್ನು ಮೂಡಿಸುವಂತಾಗಬೇಕು. ಅಂತಹ ಒಂದು ರಂಗಭೂಮಿ ಪುಸ್ತಕವೇ ಎಚ್ ಆರ್ ರಂಗನಾಥ್ ಅವರ 'ಕರ್ನಾಟಕ ರಂಗಭೂಮಿ'. ಲೇಖಕರು ತಮ್ಮ ಕೃತಿಯಲ್ಲಿ ಆರು ಅಧ್ಯಯಗಳ ರೀತಿಯಾಗಿ ವಿಭಾಗ ಮಾಡಿದ್ದಾರೆ. ಈ ವಿಧಾನ ಓದುಗರಿಗೆ ಸುಲಭವೂ ಸರಳವೂ ಆಗುತ್ತದೆ ಹಾಗೆ ಗೊಂದಲ ಎನಿಸುವುದಿಲ್ಲ.

೧. ನಾಟಕ ರಂಗಭೂಮಿ
೨. ರಂಗಭೂಮಿಯ ಪ್ರಾಚೀನತೆ
೩. ಜಾನಪದ ರಂಗಭೂಮಿ
೪. ವೃತ್ತಿ ರಂಗಭೂಮಿ
೫. ವಿಲಾಸಿ ರಂಗಭುಮಿ
೬. ರಂಗಭೂಮಿಯ ಹಿನ್ನೋಟ, ಮುನ್ನೋಟ.

ಲೇಖಕರು ಈ ರೀತಿಯಾಗಿ ವಿಭಾಗಿಸುವುದರಿಂದ ಓದುಗರಿಗೆ ಬಹಳ ಸುಲಭವೆನಿಸುತ್ತದೆ. ಇನ್ನುಳಿದಂತೆ ಕೃತಿಯನ್ನು ಓದುತ್ತಿದ್ದರೆ ನಿಜಕ್ಕೂ ಸಂಪೂರ್ಣ ಕರ್ನಾಟಕದ ಒಟ್ಟಾರೆ ರಂಗಭೂಮಿಯನ್ನು ಒಮ್ಮೆ ನೋಡಿ ಬಂದಂತೆ ಭಾಸವಾಗುವುದಂತು ಸುಳ್ಳಲ್ಲ.

ಮೊದಲಿಗೆ ರಂಗಭೂಮಿಯ ಬಗ್ಗೆ ಪರಿಚಯಿಸಿರುವ ರೀತಿ ಶ್ಲ್ಯಾಘನೀಯ. ರಂಗಭೂಮಿಯನ್ನು ಪರಿಚಯಿಸುವಾಗ ಗ್ರೀಕರನ್ನು ನೆನಪಿಸಿದ್ದಾರೆ. ರಂಗಭೂಮಿ ಗ್ರೀಕರು ನಮಗೆ ನೀಡಿರುವ ಬಳುವಳಿ ಎಂದು ತಿಳಿಸಿದ್ದಾರೆ.

ಹಾಗೆ ಅದರಲ್ಲಿ ಕರ್ನಾಟಕ ರಂಗಭೂಮಿಯ 'ಮಿತ್ರಾವಿಂದಾ ಗೋವಿಂದಾ' ನಾಟಕದಿಂದ ಶುರು ಮಾಡಿ ನವ್ಯ ಕಾಲದ ಎಲ್ಲಾ ನಾಟಕಕಾರರ ಬಗ್ಗೆಯು ಪರಿಚಯ ಈ ಕೃತಿಯಲ್ಲಿ ಉಲ್ಲೇಖವಾಗಿದೆ. ಹಾಗೇ ಕೇವಲ ಕರ್ನಾಟಕದ ಒಂದು ಭಾಗವನ್ನೋ ಅಥವಾ ಒಂದು ಜಿಲ್ಲೆಯನ್ನೋ ಮನದಲ್ಲಿ ಇಟ್ಟು ಬರೆದಿಲ್ಲ ಬದಲಿಗೆ ಕರ್ನಾಟಕದ ನಾಲ್ಕು ದಿಕ್ಕುಗಳಲ್ಲೂ ಪರ್ಯಟನೆ ಮಾಡಿ, ಆಯಾ ಭಾಗದ ರಂಗ ಕಲೆಗಳ ವಿಶೇಷತೆಗಳನ್ನು ರಚಿಸುವುದರ ಜೊತೆಗೆ, ನಾಟಕದ ಭಾಷೆ ಬಗ್ಗೆ ಕೂಡಾ ತಿಳಿಸಿದ್ದಾರೆ. ಅಲ್ಲಲ್ಲಿ ರಂಗಭೂಮಿಯ ಬಗ್ಗೆ ವಿದ್ವಾಂಸರು ನೀಡಿರುವ ಹೇಳಿಕೆಗಳನ್ನು ನೆನಪಿಸಿರುವ ರೀತಿಯು ಬಹಳ ಪೂರಕವೆನಿಸುತ್ತದೆ. ಅದು ಈ ಕೃತಿಗೆ ಇನ್ನಷ್ಟು ಪುಷ್ಟಿ ತರುತ್ತದೆ. ಅದರಲ್ಲಿ ಕಾಳಿದಾಸರ ಬಹಳ ಮುಖ್ಯವಾದ ಒಂದು ಹೇಳಿಕೆ "ಕಾವ್ಯೇಷು ನಾಟಕಂ ರಮ್ಯಂ". ಅಂದರೆ ಈ ಹೇಳಿಕೆ ನಾಟಕ ಕೃತಿಯ ಆರಂಭದಲ್ಲಿ ಇರುವುದರಿಂದ ಇದು ನಾಟಕಗಳಿಗೆ ಆಶೀರ್ವಾದವಿದ್ದಂತೆ.

ನಾಟಕ ಎನ್ನುವುದು ಕೇವಲ ಒಂದು ವರ್ಗಕ್ಕೆ ಮಾತ್ರ ಮೀಸಲಿರುವಂತದಲ್ಲ. ನಾಟಕ ಎನ್ನುವುದು ಹಿರಿಯರಿಂದ-ಕಿರಿಯರವರೆಗೆ, ಸುಜ್ಞಾನಿಗಳಿಂದ-ಅಜ್ಞಾನಿಗಳವರೆಗೆ, ಪಂಡಿತರಿಂದ-ಪಾಮರರವರೆಗೆ, ಗಂಡು, ಹೆಣ್ಣು, ಮಕ್ಕಳು, ಮುದುಕರು ಹೀಗೆ ಎಲ್ಲಾ ವರ್ಗಕ್ಕೂ ಬೇಕಾಗಿರುವ ಕಲೆ ಎಂದರೆ ಅದು ನಾಟಕ ಮಾತ್ರ. 'ನಾಟಕದಲ್ಲಿ ಭಾಷೆಗಿಂತ ಭಾವನೆ ಮುಖ್ಯ'. ಅಲ್ಲಲ್ಲಿ ಈ ರೀತಿಯ ಮಾತುಗಳು ಮನ ಮುಟ್ಟುವಂತವು. ನಾಟಕದಲ್ಲಿ ಸಂಗೀತ, ನೃತ್ಯ, ಸಂಭಾಷಣೆ, ಹಾಸ್ಯ, ಲಾಸ್ಯ, ಎಲ್ಲವೂ ಅಡಗಿದೆ ಎಂಬುದನ್ನು ಅಚ್ಚುಕಟ್ಟಾಗಿ ಕಟ್ಟಿ ಕೊಟ್ಟಿದ್ದಾರೆ. ಭರತ ತನ್ನ ಭರತನಾಟ್ಯದಲ್ಲಿ ನಾಟಕವನ್ನು ಐದನೇ ವೇದವೆಂದೇ ಪರಿಗಣಿಸಿದ್ದಾನೆ. ನಾಟಕದ ಒಂದೊಂದು ಅಂಶವನ್ನು ಒಂದೊಂದು ವೇದಕ್ಕೆ ಹೋಲಿಸಿದ್ದಾನೆ.

ಋಗ್ವೇದವನ್ನು-ನೃತ್ಯಕ್ಕೆ, ಸಾಮವೇದವನ್ನು-ಗಾನಕ್ಕೆ, ಯಜುರ್ವೇದವನ್ನು-ಅಭಿನಯಕ್ಕೆ, ಅಥರ್ವಣವೇದವನ್ನು-ಭಾವಕ್ಕೆ ಹಾಗೂ ಐದನೇ ವೇದವನ್ನು ನಾಟ್ಯವೆಂದು ಬರೆದಿದ್ದಾನೆ ನಿಜಕ್ಕೂ ಅದು ಅಕ್ಷರಶಃ ಸತ್ಯ.

ರಂಗಭೂಮಿ ಎಂಬುದು ಸಾಹಿತ್ಯ ಪರಂಪರೆಯಲ್ಲಿ ಹಿರಿಯ ಸ್ಥಾನ ಪಡೆದಿದೆ. ಕಲೆ ಹಾಗೂ ಕಲಾವಿದನಿಗೆ ಯಾವುದೇ ಜಾತಿ ಇರುವುದಿಲ್ಲ, ಧರ್ಮದ ಭೇದ-ಭಾವ ಇರುವುದಿಲ್ಲ. ಕಲೆ ಎನ್ನುವುದು ಎಲ್ಲರ ಸ್ವತ್ತು. ಅದೊಂದು ತಪಸ್ಸು. ಯಾರೂ ಶ್ರದ್ಧೆ ಭಕ್ತಿಯಿಂದ ಅದನ್ನು ಗೌರವಿಸುತ್ತಾರೋ ಅವರಿಗೆ ಕಲಾ ಶಾರದೆ ಒಲಿಯುತ್ತಾಳೆ.

## ರಂಗಭೂಮಿ ಕೃತಿಯ ವಿಶೇಷತೆಗಳು

ರಂಗಭೂಮಿಯ ವಿಭಾಗಗಳ ವಿಷಯದಲ್ಲಿ ಬಹು ಮುಖ್ಯವಾದದ್ದು ಜಾನಪದ ರಂಗಭೂಮಿ. ಅದರಲ್ಲಿ ಸಂಶೋಧನಕಾರರು ನಾಡಿನ ಎಲ್ಲಾ ರಂಗ ಕಲೆಗಳನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ. ದಕ್ಷಿಣದಿಂದ-ಉತ್ತರದವರೆಗೆ, ಪೂರ್ವದಿಂದ-ಪಶ್ಚಿಮದವರೆಗೆ, ಪರ್ಯಟನೆ ಮಾಡಿ ಎಲ್ಲಾ ಬಗೆಯ ರಂಗ ನಾಟಕಗಳನ್ನು ಕಟ್ಟಿ ಕೊಟ್ಟಿರುವ ರೀತಿ ಕಂಡಾಗ ಅದಕ್ಕಾಗಿ ಸಂಶೋಧಕರು ಪಟ್ಟ ಶ್ರಮ ಕಾಣಿಸುತ್ತದೆ. ಕೆಲಸದ ಕಾರ್ಯ ವೈಖರಿ ಎಂಥದ್ದೆಂದು ತಿಳಿಯುತ್ತದೆ.

ಜಾನಪದ ರಂಗಭೂಮಿಯಲ್ಲಿರುವಂಥಹ ದಕ್ಷಿಣ ಭಾಗದ ಭೂತಾರಾಧನೆ, ಯಕ್ಷಗಾನ, ದೈವಗಳ ಬಗ್ಗೆ ಇರುವ ಆಟಗಳು ಒಂದೆಡೆ ಕಾಣುವುದಾದರೆ, ಉತ್ತರ ಕರ್ನಾಟಕದಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದ ನಾಟಕವೆಂದರೆ ಚಂದ್ರಶೇಖರ ಕಂಬಾರರ 'ಸಂಗ್ಯಾ ಬಾಳ್ಯ' ನಾಟಕ. ಇದರ ಬಗ್ಗೆಯೂ ಈ ಕೃತಿಯಲ್ಲಿ ರಚಿತವಾಗಿರುವುದನ್ನು ನಾವು ಕಾಣಬಹುದು. ಅದರಂತೆ ಬಯಲು ಸೀಮೆಯ ನೃತ್ಯ ನಾಟಕಗಳ ಬಗ್ಗೆಯೂ ರಚಿತವಾಗಿದೆ. ಇನ್ನುಳಿದಂತೆ ಮೈಸೂರು ಭಾಗಕ್ಕೆ ಬಂದರೆ ಈ ಭಾಗದ ನಾಟಕಗಳಲ್ಲಿ ಆಡುವ ಭಾಷೆಯೇ ಬಹಳ ಮುಖ್ಯ.

ಉದಾಹರಣೆಗೆ: 'ಶ್ರೀ ಕೃಷ್ಣ ಪಾರಿಜಾತ' ನಾಟಕದ ಒಂದು ಗೀತಾ ಸಾಹಿತ್ಯ ಸಂಭಾಷಣೆ "ಸಖಿಯೇ ನಿನ್ನ ಯವ್ವನ" ಎಂಬಂತ ಸಂಭಾಷಣೆ ನುಡಿಯುವವನ ಭಾಷೆಯ ಮೇಲೆ ಸ್ಪಷ್ಟ ಅಥವಾ ಅ ಸ್ಪಷ್ಟವಾಗಿ ಉಚ್ಚಾರವಾಗುವಂಥದ್ದು.

## ನಾಡಿನಲ್ಲಿ ನಾಟಕ ಕಂಪನಿಗಳ ಆರಂಭ

ಲೇಖಕರು ನಾಟಕ ಕಂಪನಿಗಳ ಬಗ್ಗೆಯೂ ಪರಿಚಯ ಮಾಡಿದ್ದಾರೆ. ಈ ಹಿಂದೆ ತಿಳಿಸಿದಂತೆ ನಾಟಕ ಕೇವಲ ಮನರಂಜನಾತ್ಮಕತೆ ಮಾತ್ರ ಇರುವುದಲ್ಲ. ಬದಲಿಗೆ ನಾಟಕದಿಂದಲೇ ನೂರಾರು ಕುಟುಂಬಗಳು ತಮ್ಮ ಬದುಕನ್ನೇ ಅದರ ಮೇಲೆ ಅವಲಂಬಿಸಿದ್ದವು. ಅದಕ್ಕೆ ಬಹು ಮುಖ್ಯ ಉದಾಹರಣೆ ಎಂದರೆ ನಾಟಕ ಕಂಪನಿಗಳು. ದಕ್ಷಿಣ ಕರ್ನಾಟಕದಲ್ಲಿ ಮೊದಲಿಗೆ ೧೮೭೫ ರಲ್ಲಿ ಮೈಸೂರಿಗೆ 'ಸಾಂಗ್ಲಿಕಾರ್' ಎಂಬ ನಾಟಕ ಮಂಡಳಿಯನ್ನು, ನಾಟಕದಲ್ಲಿ ಅಭೂತವಾಗಿ ಆಸಕ್ತಿ ಹೊಂದಿತ್ತ ಮಹಾದೇವ ಭಟ್ಟ ಅವರು ಮುಂಬೈನಿಂದ ಕರೆಸಿದರು. ಅದು ಅಂದಿನ ಮೈಸೂರು ದೊರೆಗಳಾದ ಚಾಮರಾಜೇಂದ್ರ ಒಡೆಯರ್ ಅವರು ಈ ನಾಟಕವನ್ನು ನೋಡಿ ತುಂಬಾ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದರು. ಜೊತೆಗೆ ನಮ್ಮಲ್ಲೇ ನಾಟಕವನ್ನು ಆಡಲು ಆಜ್ಞೆಯನ್ನು ಹೊರಡಿಸುವುದಲ್ಲದೇ ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು. ಅದರ ಪ್ರತಿಫಲವಾಗಿ ಮೈಸೂರು ಅರಮನೆಗೆ ಸೇರಿದ ರಾಯಲ್ ಪಾಠಶಾಲೆ ವಿದ್ಯಾರ್ಥಿಗಳು 'ಪ್ರಹ್ಲಾದ' ಎಂಬ ನಾಟಕವನ್ನು ೧೮೮೦ ರಲ್ಲಿ ಅಭಿನಯಿಸಿ ಜನರ ಮೆಚ್ಚುಗೆಗೆ ಪಾತ್ರರಾದರು. ಮುಂದಿನ ದಿನಮಾನಗಳಲ್ಲಿ ಕೇವಲ ಕನ್ನಡದ ಪೌರಾಣಿಕ ನಾಟಕಗಳನ್ನು ಮಾತ್ರ ಆಡುವುದಲ್ಲದೇ ವಿದೇಶಿಯರಾದ ಷೇಕ್ಸ್ ಪಿಯರ್ ನ ರೋಮಿಯೋ ಜೂಲಿಯೆಟ್, ಲೈಲಾ ಮಜ್ನು ಮುಂತಾದ ನಾಟಕಗಳನ್ನು ಅನುವಾಧಿಸಿ ಅಭಿನಯಿಸುವಂತಹ ಪ್ರಯತ್ನದಲ್ಲಿ ಯಶಸ್ವಿಯಾದರು. ನಾಟಕದ ಚರಿತ್ರೆಯಲ್ಲಿ ಮುಂದೆ ನಡೆದುದೆಲ್ಲಾ ಇತಿಹಾಸವೇ ಸರಿ.

ಅಂದಿನಿಂದ ಜನರು ಅಲ್ಲಲ್ಲಿ ತಾವು ತಾವುಗಳೇ ಗುಂಪು ಕಟ್ಟಿಕೊಂಡು ನಾಟಕವಾಡಲು ಶುರು ಮಾಡಿದರು. ಕಾಲ

ಉರುಳಿದಂತೆ ತಮ್ಮ ತಮ್ಮ ನಾಟಕಗಳ ಗುಂಪಿಗೆ ತಾವೇ ಒಂದೊಂದು ಹೆಸರನ್ನು ನಾಮಕರನಗೊಳಿಸಿಕೊಂಡರು. ಆ ರೀತಿಯ ತಂಡಗಳು ಊರೂರುಗಳನ್ನು ಸುತ್ತುತ್ತಾ ಜನರನ್ನು ಮನರಂಜಿಸುತ್ತಾ ನಡೆದರು. ದಿನ ಕಳೆದಂತೆ ಆ ಜನರು ನಾಟಕವನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡರು. ಅದುವೇ ಮುಂದಿನ ದಿನಮಾನಗಳಲ್ಲಿ ನಾಟಕ ಕಂಪನಿಗಳಾಗಿ ರೂಪುಗೊಂಡವು. ಮೊದ ಮೊದಲು ಅನುವಾದಿತ ನಾಟಕಗಳೇ ನಾಡಿನಲ್ಲಿ ಅತಿ ಹೆಚ್ಚು ತಾಂಡವ ಆಡುತ್ತಿದ್ದವು. ಬರು ಬರುತ್ತಾ ಹಲವಾರು ನಾಟಕ ರಚನಕಾರರು ನಾಟಕಗಳನ್ನು ಸ್ವಂತವಾಗಿ ರಚಿಸಿ ಆಡಲು ಶುರು ಮಾಡಿದರು. ಲೇಖಕರು ವೃತ್ತಿ ರಂಗಭೂಮಿಯ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಕಟ್ಟಿ ಕೊಟ್ಟಿರುವ ರೀತಿ ಕಣ್ಣಿಗೆ ಕಟ್ಟಿದಂತೆ ಇದೆ.

ಹಳೇ ಮೈಸೂರು ಭಾಗದಲ್ಲಿ 'ಗುಬ್ಬಿ ನಾಟಕ ಕಂಪನಿ', 'ಚಾಮುಂಡೇಶ್ವರಿ ನಾಟಕ ಕಂಪನಿ' ಎಂಬ ಬೆರಳೆಣಿಕಿನಷ್ಟು ನಾಟಕ ಕಂಪನಿಗಳು ಇದ್ದರೆ, ಅದೇ ಉತ್ತರ ಕರ್ನಾಟಕದಲ್ಲಿ 'ಕೃತಾಪುರ ನಾಟಕ ಮಂಡಳಿ', 'ಹಿಂದೂ ಯೂನಿಯನ್ ಕ್ಲಬ್', 'ತಂತುಪುರಸ್ಥ ಮಂಡಳಿ' ಮುಂತಾದ ನಾಟಕ ಕಂಪನಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ತಲೆ ಎತ್ತಿದ್ದವು. ದುರಾದೃಷ್ಟವಶತ್ ಪ್ರಸ್ತುತ ದಿನಮಾನಗಳಲ್ಲಿ ನಮ್ಮಲ್ಲಿ ನಾಟಕ ಕಂಪನಿಗಳೂ ಇಲ್ಲ, ನಾಟಕ ಆಡುವವರೂ ಇಲ್ಲ, ನಾಟಕಗಳನ್ನ ನೋಡುವವರೂ ಇಲ್ಲ.

**ಉಪಸಂಹಾರ**

ಕನ್ನಡ ರಂಗಭೂಮಿಯ ಇತಿಹಾಸವನ್ನು ಅಭ್ಯಾಸ ಮಾಡುವವರಿಗೆ ಇದೊಂದು ಮಹತ್ವದ ಆಕರ ಗ್ರಂಥ. ಕರ್ನಾಟಕ ರಂಗಭೂಮಿಯ ಪ್ರಾಚೀನತೆ, ನಾಟಕ ರಂಗಭೂಮಿಗಳ ಸಂಬಂಧ, ಜಾನಪದ ರಂಗಭೂಮಿ, ವೃತ್ತಿ ರಂಗಭೂಮಿ, ವಿಲಾಸಿ ರಂಗಭೂಮಿ, ರಂಗಭೂಮಿಯ ಹಿನ್ನೋಟ, ಮುನ್ನೋಟ ಈ ಅಧ್ಯಾಯಗಳ ಮೂಲಕ ನಮ್ಮ ರಂಗಭೂಮಿಯ ಸಮಗ್ರ ಮುಖಗಳನ್ನು ಲೇಖಕರು ಇಲ್ಲಿ ವಿಶ್ಲೇಷಿಸಿದ್ದಾರೆ. ಈ ಕ್ಷೇತ್ರದ ಎಲ್ಲಾ ಅರಿವು, ಸಂಬಂಧ ಪಟ್ಟ ಆಕರಗಳ ಸಮೃದ್ಧವಾದ ಶ್ರದ್ಧಾಶೀಲ ಅಧ್ಯಯನ, ವಿಮರ್ಶೆ, ಸಾಧನ ಮತ್ತು ಪರಿಣಾಮಗಳ ಸೂಕ್ಷ್ಮವೂ, ವಿಶಿಷ್ಟವೂ ಮತ್ತು ಮಾನವೀಯವೂ ಆದ ಚಿಂತನೆಗಳು ಇಲ್ಲಿ ಮೊದಲ ಬಾರಿಗೆ ಮೈವೆತ್ತಿವೆ.

ಕರ್ನಾಟಕ ರಂಗಭೂಮಿ ಸಂಶೋಧಕರಾದ ಎಚ್ ಆರ್ ರಂಗನಾಥ್ ಅವರು ತಮ್ಮ ಸಂಶೋಧನಾ ಕೃತಿಯಲ್ಲಿ ನಾಟಕದ ಬಗ್ಗೆ ಮಾತ್ರ ರಚನೆ ಮಾಡಿರುವುದು ಮಾತ್ರವಲ್ಲದೆ, ಬದಲಿಗೆ ರಂಗ ಪ್ರಯೋಗದ ಬಗ್ಗೆಯೂ ರಚನೆ ಮಾಡಿದ್ದಾರೆ. ಅದರ ಜೊತೆಯಲ್ಲಿ ಒಟ್ಟಾರೆಯಾಗಿ ರಂಗಭೂಮಿಯ ಆಳ ಮತ್ತು ಅಗಲವನ್ನು ಪರಿಪೂರ್ಣವಾಗಿ ರಚಿಸಿ ಯಶಸ್ವಿಯಾಗಿದ್ದಾರೆ. ಇದಷ್ಟೇ ಅಲ್ಲದೆ ನಾಟಕ ರಚನಾಕಾರರ ಬಗ್ಗೆ, ನಾಟಕ ಕಲಾವಿದರ ಬಗ್ಗೆ ಬರೆದಿರುವುದರಿಂದ ಕಾಣದವರಿಗೂ ಕೂಡಾ ಮೈ ರೋಮಾಂಚನವಾಗುತ್ತದೆ.

ಹಾಗೆ ಇದರ ಜೊತೆಯಲ್ಲಿ ಈ ಕೃತಿಯನ್ನು ಓದುವುದರಿಂದ ಈಗಿನ ಸಿನಿಮಾ ಕಲಾವಿದರಿಗೆ ತಮ್ಮ ಅಭಿನಯದ ಮೇಲೆ ಸ್ವಲ್ಪವಾದರೂ ಗೌರವ ಬರುತ್ತದೆ. ಸಾಮಾನ್ಯ ಜನರಿಗೆ ರಂಗಭೂಮಿಯ ಮೇಲೆ ಅಲ್ಪ ಸ್ವಲ್ಪವಾದರೂ ಗೌರವ ಉಂಟಾಗುವುದಂತು ಸುಳ್ಳಲ್ಲ.

ನಾಟಕದ ಮೇಲೆ ಸಂಶೋಧನೆ ಮಾಡುವವರಿಗೆ, ನಾಟಕದ ಬಗ್ಗೆ ಆಸಕ್ತಿ ಇರುವವರಿಗೆ ಇದೊಂದು ಪರಿಪೂರ್ಣ ನಾಟಕ ಸಾಹಿತ್ಯದ 'ಭಗವದ್ಗೀತೆ'ಯೇ ಸರಿ.

ಕರ್ನಾಟಕ ರಂಗಭೂಮಿ ಕೃತಿಯಲ್ಲಿ ಸಂಪೂರ್ಣ ನಾಟಕದ ಬಗ್ಗೆ ಅವುಗಳ ಭಾಷೆ, ವೈವಿದ್ಯಮಯವಾದ ಆಚಾರ, ಸಂಸ್ಕೃತಿ, ಆಚರಿಸುವ ಪದ್ಧತಿ, ನಡೆದುಕೊಳ್ಳುವ ರೀತಿ ಈ ಎಲ್ಲವೂ ಕಣ್ಣಿಗೆ ಕಟ್ಟುವಂತಿದೆ.

ಒಟ್ಟಾರೆಯಾಗಿ ಎಚ್ ಆರ್ ರಂಗನಾಥ್ ಅವರು ಕರ್ನಾಟಕ ರಂಗಭೂಮಿಯಲ್ಲಿ ನಾಟಕದ ಸಂಪೂರ್ಣ ಚಿತ್ರಣವನ್ನು ಸವಿಸ್ತಾರವಾಗಿ ಎಳೆ ಎಳೆಯಾಗಿ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ

## ಆಕರ ಗ್ರಂಥ


1. ನಾ ದಾಮೋದರ ಶೆಟ್ಟಿ, ರಂಗಚಿತ್ರರಂಗ. ಸಿರಿವರ ಪ್ರಕಾಶನ, ಬೆಂಗಳೂರು (2021)
2. ಉತ್ಥಾನ್‌ಭಾರಿಘಾಟ್, ಕುವೆಂಪು ನಾಟಕಗಳು ಮುಂದಿಡುವ ರಂಗ ಪರಿಕಲ್ಪನೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು (2016)
3. ಡಾ. ಕೆ. ಮರುಳ ಸಿದ್ದಪ್ಪ, ಆಧುನಿಕ ಕನ್ನಡ ನಾಟಕ. ಅಂಕಿತ ಪುಸ್ತಕ, ಬೆಂಗಳೂರು. (2013)
4. ಡಾ. ಎಚ್. ಕೆ ರಂಗನಾಥ್, ಕರ್ನಾಟಕ ರಂಗಭೂಮಿ. ಹೇಮಂತ ಸಾಹಿತ್ಯ, ಬೆಂಗಳೂರು (2014)